ಪುತ್ತೂರಿನ ಸೌಮ್ಯ ಎಂಬ ವಿದ್ಯಾರ್ಥಿನಿ ಕೊಲೆಯಾಗಿರುವ ಬಗ್ಗೆ.

ಶ್ರೀ ಎನ್. ಯೋಗೀಶಭಟ್ : ಅಧ್ಯಕ್ಷರು ಪುತ್ತೂರಿನ ಗಲಾಟೆ ಏಕೆ ಆಷ್ಟೊಂದು ಬಿಗಡಾಯಿಸಿತು ಎನ್ನುವುದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛಿಸುತ್ತೇನೆ. ಮೊಟ್ಟಮೊದಲನೆಯದಾಗಿ ಸೌಮ್ಯ ಎಂಬ ವಿದ್ಯಾರ್ಥಿನಿಯ ಅಮಾನುಷ ಕೊಲೆ ಆಲ್ಲಿ ಏನಾಯಿತು ಅದಕ್ಕೆ ಮಾಡಿದಂತಹ ಅಶ್ರಫ್ ಎಂಬ ನಿವೃತ್ತ ಸೈನಿಕನನ್ನು ಬಂಧನಕ್ಕೆ ಒಳಪಡಿಸಿದರು. ಕೇವಲ ಮೂರ್ನಾಲ್ಕು ಗಂಟೆಯೊಳಗೆ ಪೋಲೀಸರು ಕ್ರಮವನ್ನು ತಗೊಂಡರು. ಈ ಕ್ರಮದಿಂದ ಶಮನವಾಗುವ ಸಾಧ್ಯತೆ ಇತ್ತು. ಆದರೆ ಇಲ್ಲಿ ಹೊಸ ತಿರುವು ಏನು ಬಂತೆಂದರೆ ಯಾರನ್ನು ಬಂಧಿಸಲಾಗಿತ್ತು ಅವರೊಬ್ಬ ಮಾನಸಿಕ ರೋಗಿ ಎಂದು ಶೀಲ್ಡ್‌ಮಾಡುವ ಪ್ರಯತ್ನ ನಡೆಯಿತು. ಇದರಿಂದ ಪರಿಸ್ಥಿತಿ ಬಿಗಡಾಯಿಸಿತು ಇಂತಹ ಪ್ರಕ್ಷುಬ್ಧ ವಾತಾವರಣ ಬರಲಿಕ್ಕೆ ಪೋಲಿಸರ ಕ್ರಮವೇ ಕಾರಣ ಒಂದನೆಯದಾಗಿ. ಎರಡನೆಯದು ಒಂದು ಘಟನೆ ನಡೆಯಿತು 11ನೇ ತಾರೀಖು ಮಧ್ಯಾಹ್ನ ಪುತ್ತೂರಿನ ಮಧ್ಯಭಾಗದಲ್ಲಿರುವ ಮಸೀದಿಯಿಂದ ಪೋಲಿಸರ ವರದಿ ಆಧಾರದಲ್ಲಿ 483 ಜನ ಇಕ್ಕಟ್ಟಾಗಿ ಕಲ್ಲುತೂರಾಟ ಆರಂಭ ಆಯಿತು. 1 ಗಂಟೆಗೆ ಆರಂಭವಾದ ಕಲ್ಲುತೂರಾಟ ಸಂಜೆ 5 ಗಂಟೆ ತನಕ, ಪೋಲಿಸರ ನಿಷ್ಕ್ರಿಯತೆ ಅಲ್ಲಿ ಎದ್ದು ಕಾಣುತ್ತಿತ್ತು, ಯಾರೂ ಮಧ್ಯೆಪ್ರವೇಶಿಸಿ ತಡೆಯುವಂತಹ ಪ್ರಯತ್ನ ಮಾಡಲಿಲ್ಲ. ಅಂಥ ಸಂದರ್ಭದಲ್ಲಿ ಸ್ಥಳೀಯರು ಸಂಜೆ ಐದೂವರೆ ಗಂಟೆಗೆ ಅಲ್ಲಿನ ಅಸಿಸ್ಟೆಂಟ್ ಕಮೀಶನರ್ ಅವರನ್ನು ಭೇಟಿಯಾಗಿ ತಕ್ಷಣ ನೀವು ಕ್ರಮ ತೆಗೆದುಕೊಳ್ಳಬೇಕು ಪೋಲಿಸು ಅಧಿಕಾರಿಗಳು ಕೂಡ ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿದಾಗ ಅವರು ತೆಗೆದುಕೊಳ್ಳುತ್ತೇವೆ ಎಂದು ಅಶೂರೆನ್ಸ್ ಕೊಟ್ಟು ಜನರು ಹಿಂತಿರುಗಿ ಹೋಗುತ್ತಿರುವಾಗ ಏಕಾಏಕಿಯಾಗಿ ಲಾಠಿಚಾರ್ಜ್ ಪ್ರಾರಂಭ ಮಾಡಿದರು ಇಷ್ಟೆಲ್ಲ ಕಲ್ಲುತೂರಾಟ ಮಾಡಿದವರ ಮೇಲೆ ಏನೇನೂ ಕ್ರಮ ತೆಗೆದುಕೊಳ್ಳುವುದಕ್ಕೆ ಈ ಪೋಲಿಸ್ ಅಧಿಕಾರಿಗಳು ಹೋಗಿಲ್ಲ ಬದಲಾಗಿ ಶಾಂತರೀತಿಯಲ್ಲಿ ಚದುರುತ್ತಿದ್ದ ಜನರ ಮೇಲೆ ಲಾಠಿ ಚಾರ್ಜಾಯಿತು ಅಷ್ಟು ಮಾತ್ರವಲ್ಲ, ಅಲ್ಲಿರುವ ವೆಂಕಟರಮಣ ದೇವಸ್ಥಾನದಲ್ಲಿ ಒಳಗೆ ನುಗ್ಗಿ ಏಳು ಟಿಯರ್‌ಗ್ಯಾಸ್ ಸೆಲ್‌ಗಳನ್ನು ಹೊಡೆದಿದ್ದಾರೆ. ಇಂತಹ ಕ್ರಮ ಕೈಗೊಳ್ಳಲು ಕಾರಣವೇನು ಎಂಬ ಪ್ರಶ್ನೆ ಇಲ್ಲಿ ನಾನು ಕೇಳುತ್ತಿದ್ದೇನೆ. ಪೋಲಿಸರ ತಪ್ಪುಹೆಜ್ಜೆಯಿಂದಾಗಿ ಇಡೀ ಜಿಲ್ಲೆಯಲ್ಲಿ ಪರಿಸ್ಥಿತಿ ಬಿಗಡಾಯಿಸುವಂತಹ ಪರಿಸ್ಥಿತಿ ಬರುತ್ತಾ ಇದೆ. ಆದ್ದರಿಂದ, ನಾನು ಇಷ್ಟೇ ಕೇಳುವುದು, ಇಂತಹ ಪೋಲಿಸು ಅಧಿಕಾರಿಗಳು ಯಾರಿದ್ದಾರೆ ಅವರ ಮೇಲೆ ಕ್ರಮ ಕೈಗೊಳ್ಳಿ ಆದರೆ, ಸಸ್ಪೆಂಡ್ ಮಾಡಬೇಡಿ. ಒಂದು ತಪ್ಪು ಹೆಜ್ಜೆಯಿಂದಾಗಿ ಇಡೀ ಜಿಲ್ಲೆಯನ್ನು ಉರಿಸುವಂತಹ ಕಾರ್ಯಕ್ಕೆ ತಾವು ಕೈಹಾಕಬೇಡಿ ಎಂದು ಹೇಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರೇ ಇದನ್ನು ಹೆಚ್ಚು ಬೆಳೆಸುವಂತಹ ಅಗತ್ಯ ಇಲ್ಲ. ಇಲ್ಲಿ ಎಂತಹ ಅಮಾನುಷ ಕೃತ್ಯ, ಅದು ಯಾವುದೇ ಜನಾಂಗದವರು ಇರಲಿ, ಇಲ್ಲಿ ಜಾತಿಪ್ರಶ್ನೆ ಬರುವುದಿಲ್ಲ, ಎಲ್ಲರೂ ತಲೆತಗ್ಗಿಸುವಂತಹ ಕೆಲಸ ಮಾಡಿದ ವ್ಯಕ್ತಿ ಬಗ್ಗೆ ಒಬ್ಬ ಡಿವೈಎಸ್‌ಪಿ ಹೇಳಿಕೆ ಕೊಟ್ಟು ಮಾನಸಿಕವಾಗಿ ಆತ ಅಸ್ವಸ್ಥನಿದ್ದ ಆ ಹೆಣ್ಣುಮಗಳ ಮೇಲೆ ಹೀಗೆ ಮಾಡಿದ ಎಂದು ಹೇಳುವ ಮಟ್ಟಕ್ಕೆ ಪೋಲೀಸರು, ಅಧಿಕಾಗಳು ಹೋಗುತ್ತಾರೆ ಅಂದರೆ ಯಾವರೀತಿಯಲ್ಲಿ ಪೋಲಿಸ್ ಇಲಾಖೆಯ

ಮೇಲೆ ವಿಶ್ವಾಸ ಇಡುವುದಕ್ಕೆ ಸಾಧ್ಯ ಇದೆ, ಇದು ಮೊದಲನೆಯದು ಎರಡನೆಯದು, ಒಬ್ಬ ಹೆಣ್ಣುಮಗಳ ಮಾನಹರಣವಾಗಿ ಕೊಲೆಯಾದ ಮೇಲೆ ಜನ ಸಹಜವಾಗಿ ಆಕ್ರೋಶಕ್ಕೆ ಒಳಗಾಗಿ ಬೀದಿಗಿಳಿದರು ಗಲಾಟೆಗಳಾಯಿತು ಬಂದ್ ಆಯಿತು ಎಲ್ಲ ಆಯಿತು. ಅದಾದಮೇಲೆ ಅದೇ ಪುತ್ತೂರಿನಲ್ಲಿ ಮಸೀದಿಯಲ್ಲಿ 400-500 ಜನ ಸೇರುತ್ತಾರೆ ಅಂದರೆ ಅದು ಸೇರದಹಾಗೆ ನೋಡಿಕೊಳ್ಳುವಂತಹ ದೊಡ್ಡ ಜವಾಬ್ದಾರಿ ಇತ್ತು ಆ ಕೆಲಸವನ್ನು ಪೋಲಿಸಿನವರು ಮಾಡಲಿಲ್ಲ ಅದನ್ನು ಪ್ರತಿಭಟನೆ ಮಾಡುವುದಕ್ಕೆ ಜನ ಬಂದಾಗ ಅಲ್ಲಿ ಕಲ್ಲುತೂರಾಟ ಆಯಿತು ಎಂದು ಅವರ ಮೇಲೇ ಲಾಠಿಚಾರ್ಜಾಗುತ್ತದೆ. ಅವರು ಏಕೋ ಹೇಳಲಿಲ್ಲ, ಬಸ್ ನಂಬರ್‌ಗಳಿದೆ ನನ್ನ ಹತ್ತಿರ. ಮಸೀದಿಯಿಂದ ಯಾರು ಕಲ್ಲು ತೂರಿದರೋ ಅವರನ್ನು ಪೋಲಿಸು ಅಧಿಕಾರಿಗಳೇ ಬಸ್ಸಿನಲ್ಲಿ ಕೂರಿಸಿ ಬೇರೆ ಕಡೆ ಕಳಿಸಿಕೊಡುವ ಪ್ರಯತ್ನ ಮಾಡುತ್ತಾರೆ ಎನ್ನುವುದು, ಬಸ್ ನಂಬರ್ ಎಲ್ಲಾ ಡೀಟೈಲ್ಸ್ ಕೊಡುತ್ತೇವೆ. ಪೋಲಿಸು ಇಲಾಖೆ ಬಗ್ಗೆ ಜನ ಗೌರವದಿಂದ ನೋಡಬೇಕಾಗಿದೆ. ವಿಶ್ವಾಸ ಬರಬೇಕಾಗಿದೆ ಖಾಕಿ ಬಟ್ಟೆಯವರೇ ಈ ತರಹ ವರ್ತನೆ ಮಾಡಿದರೆ ಯಾರಿಗೂ ಅದು ಶೋಭೆ ತರುವಂತಹ ವರ್ತನೆಯಲ್ಲ. ಇಂತಹ ಅಪರಾಧ ಮಾಡಿದವರು ಯಾರೇ ಇರಲಿ, ಅವರು ಯಾವುದೇ ಸಮಾಜದವರಿರಲಿ ಹಿಂದು, ಮುಸ್ಲಿಂ ಸಮಾಜ ಎಂದು ಹೇಳುವುದಕ್ಕಿಂತ ಹೆಚ್ಚಾಗಿ ಇಂತಹ ಘಟನೆಗಳು ಮರುಕಳಿಸದಂತೆ ನೋಡಿಕೊಳ್ಳುವ ಜವಾಬ್ದಾರಿ ಸರ್ಕಾರದ್ದಿತ್ತು. ತಾವು ಒಂದು ಕ್ಷಣ ಯೋಚನೆ ಮಾಡಿ. ಎಂತಹ ಒಂದು ಸೂಕ್ಷ್ಮವಾದ ವಿಷಯ, ಈ ಬೆಂಕಿ ಇಡೀ ಜಿಲ್ಲೆಗೆ ರಾಜ್ಯಕ್ಕೆ ಹತ್ತಿಕೊಳ್ಳುವಂತಹ ವಾತಾವರಣ ಇದ್ದಾಗ ಬೇರೆ ಜನ ಪುತ್ತೂರಿಗೆ ಬರದಂತೆ ಅಚ್ಚುಕಟ್ಟು ಬಿಗಿ ಬಂದೋ ಬಸ್ತ ಮಾಡುವುದಕ್ಕೆ ಸರ್ಕಾರ ವಿಫಲವಾಗಿದೆ ಎಂಬುದು ನಮ್ಮ ಉದ್ದೇಶ. ಈಗಲಾದರೂ ಅಲ್ಲಿ ನಡೆದದ್ದು ಏನು? ಸೂಕ್ತವಾದ ಕ್ರಮ ತೆಗೆದುಕೊಳ್ಳುತ್ತೀರಾ? ಕಲ್ಲು ತೂರುತ್ತಿದ್ದವರಿಗೆ ಪೋಲಿಸರೇ ರಕ್ಷಣೆ ಕೊಟ್ಟು ಬಸ್‌ನಲ್ಲಿ ಕೊಳಿಸಿಕೊಟ್ಟಿದ್ದು ಹೌದೋ ಅಲ್ಲವೋ? ತಮಗೇನು ಮಾಹಿತಿ ಇದೆ ತಿಳಿಸಿ.

ಶ್ರೀ ಎನ್. ಯೋಗೀಶ್ ಭಟ್ : ಅಧ್ಯಕ್ಷರೇ ಬಸ್ ನಂಬರ್ ಕೊಡುತ್ತೇನೆ. (1) ಕೆಎ 25-447 (2) ಕೆಎ 28-324 ಈ ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಮಸೀದಿಯಲ್ಲಿದ್ದವರನ್ನು ಕರೆದುಕೊಂಡು ಎರಡು ಬಸ್ ಮಾತ್ರವಲ್ಲ ಐದು ಬಸ್‌ಗಳು ಹೊರಟಿವೆ. 30 ಕಿಮೀ. ದೂರವಿರುವ ಮಂಚಿ ಹಾಗೂ ಬೀಸಿ ರಸ್ತೆ ಪ್ರದೇಶಗಳಲ್ಲಿ, ಪುತ್ತೂರಿನವರು ಅಲ್ಲ ಹಾಗೆ ಬಂದವರು ಅವರನ್ನು ತಲುಪಿಸುವ ವ್ಯವಸ್ಥೆ ರಾಜಾರೋಷವಾಗಿ ಈ ಸರ್ಕಾರದ ಕಡೆಯಿಂದ ಆಗಿದೆ. ಇದರ ಬಗ್ಗೆ ನಮ್ಮ ಪ್ರತಿಭಟನೆಯನ್ನು ಸನ್ಮಾನ್ಯ ಡಿಜಿಪಿ ಮತ್ತು ಗೃಹಮಂತ್ರಿಗಳ ಗಮನಕ್ಕೆ ತಂದಾಗ ನಮಗೆ ಆಶ್ಚರ್ಯ ಕಾದಿತ್ತು. ಎರಡೆರಡು ಘಂಟೆಗೆ ಪುತ್ತೂರಿನಿಂದ ವರದಿ ಬರುತ್ತಿದೆ ಎಂದು ಹೇಳಿದಂತಹ ಅಧಿಕಾರಿಗಳು ಸಹ ನಮಗೆ ವಿಷಯ ಗೊತ್ತಿಲ್ಲ ಎಂದು ಹೇಳುವಂತಹ ಅಸಹಾಯಕತೆ ಪ್ರದರ್ಶಿಸಿದರು. ಇದರ ಬಗ್ಗೆ ಕೂಡ ಮಾನ್ಯ ಗೃಹಮಂತ್ರಿಗಳು ಉತ್ತರಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈ ವಿಷಯದ ಬಗ್ಗೆ ನಾನು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೆ. ಅದನ್ನು ಪ್ರಶ್ನೋತ್ತರವಾದ ಮೇಲೆ ತೆಗೆದುಕೊಳ್ಳುವುದಾಗಿ ಹೇಳಿದರು, ಇವತ್ತು ಹೇಳಿಕೆ

ೂಡಿಸುತ್ತೇನೆ ಎಂದು ಹೇಳಿದಿರಿ, ಅದಕ್ಕೇ ನಾನು ಅದನ್ನು ಎತ್ತಲಿಲ್ಲ, ಹೇಗೂ ಹೇಳಿಕೆ ನೇರವಾಗಿ ಮಾಡುತ್ತಾರೆ, ವಿವರಣೆ ಕೇಳೋಣ. ಏನೇ ಆಗಲಿ ಆ ಭಾಗದ ಶಾಸಕರು ಕೂಡ ಈ ಪ್ರಶ್ನೆ ಎತ್ತಿದ್ದಾರೆ. ಇದು ಬಹಳ ಸೆನ್ಸಿಟೀವ್ ವಿಷಯವಿರುವುದರಿಂದ ಇದನ್ನು ಹೆಚ್ಚು ಬೆಳೆಸಬೇಕು ಎನ್ನುವ ಇಚ್ಛೆ ನಗಿಲ್ಲ. ಬೆಳೆಸಲೂ ಬಾರದು. ಒಂದು ಹೋಗಿ ಒಂದಾಗುವ ಸಾಧ್ಯತೆ ಇದೆ ಅನಾಹುತವಾಗುವ, ಪಬ್ಲಿಕ್‌ಪ್ರಾಪರ್ಟಿ ಹಾಳಾಗುವ ಸಾಧ್ಯತೆ ಇದೆ. ಆದರೆ ವಿವೇಕಾನಂದ ಕಾಲೇಜಿನಲ್ಲಿ ಫೈನಲ್ ಬಿಎಸ್‌ಸಿಯಲ್ಲಿ ಓದುತ್ತಿದ್ದ ಶ್ರೀಮತಿ ಸೌಮ್ಯಭಟ್ ಆಕೆಯ ಕೊಲೆ ಒಬ್ಬ ಎಕ್ಸ್ ಸಿಪಾಯಿ ಅಶ್ರಫ್ ಎಂದ ಆಯಿತು ಆಮೇಲೆ ಸಹಜವಾಗಿ ಅಲ್ಲಿ ಜನ ಸ್ವಲ್ಪ ಎಮೋಶನ್ನಾಗಿ ಹೊರಗಡೆ ಬಂದರು ಆದರೆ ಅವರು ಶಾಂತಿಯುತವಾಗಿ ಪ್ರತಿಭಟನೆ ನಡೆಸುವಾಗ ಅದು ಹಿಂಸಾಚಾರಕ್ಕೆ ತಿರುಗಿ ಅನೇಕ ಖಂಗಡಿಮುಂಗಟ್ಟುಗಳ ಲೂಟಿಯಾಗಿದೆ ಇದನ್ನೂ ನಾವೆಲ್ಲರೂ ಖಂಡಿಸಲೇಬೇಕು. ಇದನ್ನು ಮಾಡಿದವರು ಯಾವ ಕೋಮಿನವರೇ ಇರಬಹುದು, ಯಾವ ಧರ್ಮದವರೇ ಇರಬಹುದು, ಯಾವ ಭಾಷೆಯವರೇ ಇರಬಹುದು, ಕೆಟ್ಟ ಕೆಲಸ ಮಾಡತಕ್ಕಂತವರ ಬಗ್ಗೆ ತಾವು ಖಡಾಖಂಡಿತವಾಗಿ ಎಂದೂ ಅನುಕಂಪ ತೋರಿಸತಕ್ಕಂತಹ ಪ್ರಶ್ನೆ ಇಲ್ಲ, ದಾಕ್ಷಿಣ್ಯ ತೋರಿಸತಕ್ಕಂತಹ ಪ್ರಶ್ನೆ ಇಲ್ಲ. ಆದರೆ ಇದರ ಹೆಸರಿನಲ್ಲಿ ಕೆಲವು ಕಡೆ ಏನಾಗಿದೆ ಎಂದರೆ, ಈ ಘಟನೆ ಆಗಿರುವುದು ಪುತ್ತೂರಿನಲ್ಲಿ, ಪುತ್ತೂರಿಗೆ ಸೀಮಿತವಾಗಿ ಅಲ್ಲಿ ಕೆಲವು ಅಂಗಡಿಗಳು ಲೂಟಿಗಳಾದವು, ಅಲ್ಲಿ ಯಾರ್ಯಾರ ಅಂಗಡಿಗಳು ಲೂಟಿ ಆಗಿದೆ ಎನ್ನುವುದು ಅವರಿಗೆ ಗೊತ್ತಿದೆ. ಅದನ್ನೂ ಕೂಡ ಹೇಳಬೇಕು. ಎರಡನೆಯದಾಗಿ ಸೂಳ್ಯ, ಈ ಇನ್‌ಸಿಡೆಂಟ್‌ಗೂ ಸೂಳ್ಯಕ್ಕೂ ಸಂಬಂಧ ಇಲ್ಲ. ಆದರೆ ಸೂಳ್ಯಾದಲ್ಲೂ ಗಲಾಟೆ, ಮಂಗಳೂರಿನಲ್ಲಿ ಬಂದ್, ಅದೇ ರೀತಿಯಾಗಿ ಮಂಗಳೂರು ಜಿಲ್ಲೆಯಲ್ಲಿ ಅನೇಕ ಪಟ್ಟಣಗಳಲ್ಲಿ ಇವತ್ತಿನ ದಿವಸ ಈ ಒಂದು ಕೆಟ್ಟ ವಾತಾವರಣ ನಿರ್ಮಾಣವಾಗಿದೆ. ಇದರ ಕಡೆ ಗಮನ ಕೊಡತಕ್ಕಂತಹ ಪ್ರಯತ್ನ ಸರ್ಕಾರ ಏನು ಮಾಡಿದೆ ಮಾಡುತ್ತಾ ಇದೆ. ಏಕೆಂದರೆ, ಇದು ಎರಡು ಮೂರು ದಿವಸಗಳ ಹಿಂದೆ 144ನೇ ಸೆಕ್ಷನ್ ಪ್ರಕಾರ ಕರ್ಫ್ಯೂ ಹಾಕಿದರೂ ಕೂಡ ಇವತ್ತು ಕಂಟಿನ್ಯೂಯಸ್ ಆಗಿ ಸ್ಟ್ಯಾಬಿಂಗ್ ನಡೆಯುತ್ತಾ ಇದೆ. ನೀವು ಹೇಳಿದಿರಿ ಪುತ್ತೂರಿನಲ್ಲಿ ಪೀಸ್‌ಫುಲ್ ಇದೆ ಎಂದು. ಆದರೆ ನನಗೆ ಫೋನ್ ಬಂದಿತ್ತು ಸ್ಟ್ಯಾಬಿಂಗ್ ಇದೆ ಎಂದು. ಈಗ ಸ್ಟೇ ಇನ್‌ಸಿಡೆಂಟ್ ಕೂಡ ಆಗುತ್ತಾ ಇದೆ. ಕೆಲವು ಅಂಗಡಿಗಳಿಗೆ ಹೋಗುವುದು ಲೂಟಿ ಮಾಡುವುದು, ಓಡಿಹೋಗುವುದು. ಮತ್ತೆ ಕೆಲವರಿಗೆ ಮನೆಯೊಳಗೆ ಹೋಗಿ ಹೊಡೆದು ಓಡಿ ಹೋಗುವುದು ಇಂತಹ ಕೆಲಸ ಕೂಡ ನಡೆದಿದೆ. ಅದಕ್ಕೋಸ್ಕರ ಯಾರು ತಪ್ಪು ಮಾಡಿದ್ದಾರೆ ಅವರಿಗೆ ಶಿಕ್ಷೆ ಆಗಲೇಬೇಕು. ಇದರ ಬಗ್ಗೆ ನಮ್ಮ ಭಿನ್ನಾಭಿಪ್ರಾಯ ಇಲ್ಲ. ಇಂತಹ ಕೆಟ್ಟ ಜನರಿಗೆ ರಕ್ಷಣೆ ಕೊಡಬೇಕು ಎಂದು ಯಾರೂ ಕೂಡ ಹೇಳುವುದಿಲ್ಲ. ಆದರೆ ಅದೇ ಸಮಯದಲ್ಲಿ ಇನ್ನೋಸೆಂಟ್ ಜನ ಕೂಡ ಸಫರ್ ಆಗುತ್ತಾರೆ. ಯಾರು ಇದರಲ್ಲಿ ಇನ್‌ವಾಲ್ವ್ ಆಗಿಲ್ಲ, ಈ ವಿಷಯದಲ್ಲಿ ಸಂಬಂಧ ಇಲ್ಲ ಅಂತಹ ಜನ ಕೂಡ ಹೀನ ಕೃತ್ಯವನ್ನು ಖಂಡಿಸಿ ಅವರೂ ಕೂಡ ಅಂಗಡಿಗಳನ್ನು ಮುಚಿದ್ದಾರೆ, ಮತ್ತು ಸಹಕಾರ ಕೊಟ್ಟಿದ್ದಾರೆ. ಈ ವಿಷಯದಲ್ಲಿ ಸರ್ಕಾರ ಏನಾಗಿದೆ ಎಂದರೆ, ಇಂತಹ ಹೀನ ಕೃತ್ಯವನ್ನು ಮಾಡತಕ್ಕಂತವರಿಗೆ ಶಿಕ್ಷೆ ಕೊಡುವುದರಲ್ಲಿ ಮತ್ತು ಎರಡನೆಯದಾಗಿ ಮುಗ್ಧ ಜನರಿಗೆ ರಕ್ಷಣೆ ಕೊಡುವುದರಲ್ಲಿ, ಕರ್ತವ್ಯದಲ್ಲಿ ವಿಫಲರಾಗಿದ್ದೀರಾ ಎಂದು

ಹೇಳಬೇಕಾಗಿದೆ. ಏಕೆಂದರೆ, ಸೂಳ್ಯದಲ್ಲಿ ನಡೆದಂತಹ ಘಟನೆಗೆ ತಾವು ಕಂಟ್ರೋಲ್‌ನಲ್ಲಿ ಇಟ್ಟುಕೊಂಡಿದ್ದರೆ, ಪುತ್ತೂರಿನಲ್ಲಿ ಆದಂತಹ ಘಟನೆಯನ್ನು ಕಂಟ್ರೋಲ್‌ನಲ್ಲಿ ಇಟ್ಟುಕೊಂಡಿದ್ದರೆ, ನೀವು ಅಲ್ಲಿರುವ ಜನರನ್ನು ಒಬ್ಬರಿಗೊಬ್ಬರನ್ನು ಸೇರಿಸಿ ಒಬ್ಬರ ಮೇಲೆ ಒಬ್ಬರು ಕಲ್ಲು ತೂರತಕ್ಕಂತಹದ್ದಾಗಲಿ, ಅಥವಾ ಕೆಲವು ಜನ ಮೊದಲಿನ ಸೇಡು ಇದ್ದರೆ ಅವರ ಮೇಲೆ ಕಲ್ಲು ತೂರತಕ್ಕಂತಹದ್ದಾಗಲಿ ನೀವು ಕಂಟ್ರೋಲ್ ಮಾಡಿದ್ದರೆ ಸೂಳ್ಯಾದಲ್ಲಿ ಪ್ರತಿಭಟನೆ ಆಗುತ್ತಿರಲಿಲ್ಲ. ಸೂಳ್ಯದಲ್ಲಿ ಪ್ರತಿಭಟನೆ ಆಯಿತು ಎಂದು ಮಂಗಳೂರಿನಲ್ಲಿ ಆಯಿತು, ಮಂಗಳೂರಿನಲ್ಲಿ ಆಯಿತು ಎಂದು ಸೂರತ್ಕಲ್‌ನಲ್ಲಿ ಆಯಿತು. ಹೀಗೆ ಎಲ್ಲಾ ಕಡೆ ಇವತ್ತಿನ ದಿವಸ ನಡೆದಿದೆ. ಆದುದರಿಂದ, ದಯವಿಟ್ಟು ತಾವು ಏನು ಕ್ರಮ ತೆಗೆದುಕೊಂಡಿದ್ದೀರಾ ಅದರ ಬಗ್ಗೆ ಯಾವ ನೀತಿಯನ್ನು ಅನುಸರಿಸಿದಿರಿ ಏಕೆಂದರೆ ಇದು ಬೇರೆ ಬೇರೆ ಉಳಿದ ಪಟ್ಟಣಗಳಲ್ಲಿ ರಾಜ್ಯಗಳಲ್ಲಿ ಹರಡಬಾರದು ಇದರ ಬಗ್ಗೆ ಡಿಸ್‌ಕಷನ್ ಬೇಡ ಎಂದು ನಾನು ಹೆಚ್ಚಿಗೆ ಹೇಳುತ್ತಾ ಇಲ್ಲ. ಆದ್ದರಿಂದ, ದಯವಿಟ್ಟು ಇದಕ್ಕೆ ಸಂಬಂಧಪಟ್ಟ ಹೇಳಿಕೆಯನ್ನು ಕೊಡಬೇಕು, ಮತ್ತು ಮುಗ್ಧ ಜನರಿಗೆ ರಕ್ಷಣೆ ಕೊಡಬೇಕು ಮತ್ತು ಕಲ್‌ಪ್ರಿಂಟ್ಸ್‌ಗಳಿಗೆ ಶಿಕ್ಷೆ ಆಗಬೇಕು ಎಂದು ಕೇಳಿಕೊಳ್ಳುತ್ತೇನೆ.

+ ಶ್ರೀ ಆರ್. ರೋಷನ್‌ಬೇಗ್ (ಗೃಹ ಸಚಿವರು) : ಸನ್ಮಾನ್ಯ ಸಭಾಧ್ಯಕ್ಷರೆ, ಪುತ್ತೂರಿನಲ್ಲಿ ಏಳನೇ ತಾರೀಖು ಒಂದು ಘಟನೆ ಆಯಿತು. ಅಲ್ಲಿ ಶ್ರೀಗಣಪತಿ ಭಟ್, ಬಿನ್ ಜರ್ನಾರ್ಧನ ಭಟ್ ಅವರ ಮಗಳು ಕುಮಾರಿ ಸೌಮ್ಯ, ಇಪ್ಪತ್ತೊಂದು ವರ್ಷ, ಅಂತಿಮ ಬಿಎಸ್ಸ್‌ಸಿ, ವಿದ್ಯಾರ್ಥಿನಿ ವಿವೇಕಾನಂದ ಕಾಲೇಜು, ಪುತ್ತೂರ್. ಸೌಮ್ಯ ಎಂಬ ಹುಡುಗಿ ಮಿಸ್ಸಿಂಗ್ ಆಗಿದ್ದಾಳೆ ಎಂದು ಮೊದಲೇ ಕಂಪ್ಲೆಂಟ್ ಬಂದಿತ್ತು. ಜನಾರ್ಧನ ಭಟ್ ಅವರು ಕಂಪ್ಲೆಂಟ್ ಮಾಡಿದ ಮೇಲೆ a case in puttur Town under crime No. 108/97 under Section 302 was taken up. ಅದೇ ದಿವಸ ನಮ್ಮ ಪೋಲೀಸಿನವರು ಪ್ರಾಂಮ್ಪ್ ಆಗಿ ಸರ್ಚ್ ಮಾಡಿದರು. ಆಗ ಹರ್ಶಪ್ ಎಂಬ ಆರ್ಮಿಯಲ್ಲಿ ಇದ್ದಂತ ಸಿಪಾಯಿ ಆ ಊರಿಗೆ ರಜಕ್ಕೆ ಬಂದಿದ್ದ. ಅವನ ಮೇಲೆ ಅನುಮಾನ ಬಂದು ಅವನನ್ನು ಅರೆಸ್ಟ್ ಮಾಡಿದರು. ಅರೆಸ್ಟ್ ಮಾಡಿದ ಮೇಲೆ ಟೆನ್‌ಷನ್ ಶುರು ಆಯಿತು. ಎಲ್ಲಾ ಜನಾಂಗದವರು from both sides ಈ ರೀತಿ ಆಗಬಾರದಾಗಿತ್ತು ಎಂದು ಖಂಡಮ್ ಮಾಡುತ್ತಾರೆ. ಅವನಿಗೆ ಶಿಕ್ಷೆಕೊಡಬೇಕು ಎಂದು ಪೊಲೀಸರು ಅವನಿಗೆ ಅರೆಸ್ಟ್ ಮಾಡಿ ಸೆಕ್ಷನ್ 302ರ ಕೆಳಗೆ ಕೇಸ್ ಬುಕ್ ಮಾಡಿದರು. ಅನಂತರ ಡೆಡ್ ಬಾಡೀಸ್‌ನ ಅವರ ರಿಲೇಟಿವ್‌ಗೆ ಹ್ಯಾಂಡ್‌ಓವರ್ ಮಾಡಿ ಫ್ಯೂನರಲ್ ಲಾಸ್ಟ್ ರೈಟ್ಸ್ ಆದಮೇಲೆ ವಿವೇಕಾನಂದ ಕಾಲೇಜಿನ ಹುಡುಗರು ಪ್ರೋಸೆಶನ್ ತೆಗೆದುಕೊಂಡು ಹೋಗುತ್ತಾರೆ, ಆ ಪ್ರೊಸೆಶನ್ ತೆಗೆದುಕೊಂಡು ಹೋದಾಗ ಅಲ್ಲಿ ಮದ್ರಾಸ್ ಡ್ಯಾಮೇಜ್ ಆಗುತ್ತದೆ, ಅಲ್ಲಿ ಇದ್ದ ಫರ್ನಿಚರ್ಸ್ ಎಲ್ಲಾ ಡ್ಯಾಮೇಜ್ ಆಗುತ್ತದೆ. ಆ ಪ್ರೋಸೆಶನ್‌ನಲ್ಲಿ ರಾಜಕಾರಿಣಿ ವ್ಯಕ್ತಿಗಳು ಇರುತ್ತಾರೆ, ಅವರು ಬಂದ್ ಕರೆ ಕೊಡುತ್ತಾರೆ. 9ನೇ ತಾರೀಖು ಪುತ್ತೂರು ಬಂದ್ ಆಗಬೇಕು ಎಂದು ಹೇಳಿ, on 9th the students of various colleges and leaders of various students associations ವಿವೇಕಾನಂದ ಕಾಲೇಜಿನಲ್ಲಿ ಅಸೆಂಬಲ್ ಆಗಿ ಅಲ್ಲಿಂದ ಒಂದು ಪ್ರೋಸೆಶನ್ ತೆಗೆದುಕೊಂಡು ಹೋಗುತ್ತಾರೆ. ಅಲ್ಲಿಂದ ಡಿ.ಸಿ., ತಹಸೀಲ್ದಾರ್ ಆಫೀಸಿಗೆ

ಹೋಗೋಣ ಎಂದು ಆ ಪ್ರೊಸೆಶನ್‌ನಲ್ಲಿ ಅಜಿಟೇಡ್ ಮೂಡ್‌ನಲ್ಲಿ ಇರುತ್ತಾರೆ. ಅಲ್ಲಿ ಬರುವಾಗ ಸೈನ್ ಬೋರ್ಡ್ ಶೆಟ್ಟರ್ಸ್, ಟ್ಯೂಬ್ ಲೈಟ್ಸ್, ಗ್ಲಾಸ್, ಡೋರ್ಸ್, ಐದಾರು ಅಂಗಡಿಗಳು, ಶೂ, ಶಾಫ್ ಅಂಗಡಿ, ಒಂದು ವೆಜಿಟೆಬಲ್ ಶಾಫ್ಸ್ ಇದೆಲ್ಲಾ ransack ಮಾಡಿ ಡ್ಯಾಮೇಜ್ ಮಾಡುತ್ತಾರೆ. ಸಿಚ್ಯುಯೇಶನ್ ಬಹಳ out of ಕಂಟ್ರೋಲ್‌ಗೆ ಹೋಗುತ್ತಾ ಇದೆ ಎಂದು ಹೇಳಿ, ಪೋಲೀಸರು ಲಾಟಿ ಚಾರ್ಜ್ ಮಾಡಿ ಡಿಸ್‌ಬರ್ಸ್ ಮಾಡುತ್ತಾರೆ. ಮಾನ್ಯ ಸಭಾಧ್ಯಕ್ಷರೆ, ಈ ಒಂದು ಘಟನೆ ಟೈಂನಲ್ಲಿ, inspite of tense situation ಪೋಲೀಸರು ಬಹಳ restraint ಆಗಿ ಕೆಲಸ ಮಾಡುತ್ತಾರೆ. ಏಕೆಂದರೆ ಫೈರಿಂಗ್ ಓಪನ್ ಮಾಡುವುದಕ್ಕೆ ಹೋಗಲಿಲ್ಲ, ಬರೀ ಲಾಟಿ ಚಾರ್ಜ್‌ನಲ್ಲಿ ಸಿಚ್ಯುಯೇಷನ್ ಕಂಟ್ರೋಲ್ ಮಾಡುತ್ತಾರೆ. About 1000 strong procession including ಇನ್ನೂರು ಜನ ಗರ್ಲ್ಸ್ ಸ್ಟೂಡೆಂಟ್ ಇದ್ದರು. ಆವಾಗ ಅಲ್ಲಿ ಎಸಿಪಿ ಗೆ ಅಲ್ಲಿಂದ ಮೆಮೋರಂಡಮ್ ಸಬ್‌ಮಿಟ್ ಮಾಡಿದರು ಆನಂತರ ಸ್ಟೋನ್ pelting ಆದಾಗ ಡಿಎಸ್‌ಪಿ, PSI Kadaba and 10 other police constables and head constables were injured. As a measure of adequate police bundobust, 3 DSPs, 9 police Inspectors 21 Sub-Inspectors, 3 platoons of DSRP and 4 DAR platoons and 250 ಸಿವಿಲ್ ಪೋಲೀಸ್ ಕೂಡ ಅಲ್ಲಿ ಸಿಚ್ಯುಯೇಷನ್ ಕಂಟ್ರೋಲ್ ತರುವುದಕ್ಕೆ ಡೆಪ್ಲೈ ಆಗುತ್ತಾರೆ ನಂತರ ಈ ಇನ್‌ಫರ್‌ಮೇಷನ್ ಎಲ್ಲಾ ಕಡೆ ಹರಡಿದ ಮೇಲೆ ಬೇರೆ ಎಲ್ಲಾ ಕಡೆ ಕಾಲೇಜ್ ಕ್ಲೋಸ್ ಮಾಡಿದರು. ಆಗ ಅಲ್ಲಿಗೆ 5 ಜನ ಪೋಲಿಸರು ಹೋಗಿ ಕಂಟ್ರೋಲ್ ಮಾಡಿದರು. 10ನೇ ತಾರೀಖು ಅಲ್ಲಿ ಪೀಸ್ ಕಮಿಟಿ ಮೀಟಿಂಗ್ ಮಾಡಿದರು. ಏಕೆಂದರೆ ಎರಡೂ ಕಮ್ಯೂನಿಟಿ ಅವರು ಗಲಾಟೆ ಮಾಡಬಾರದೆಂದು, ಬೇರೆ ಕಮ್ಯೂನಿಟಿ ಕೂಡ ಇದನ್ನು ಖಂಡಮ್ ಮಾಡಿ ಇದು ಸರಿ ಇಲ್ಲಾ, ಅವರಿಗೆ ಶಿಕ್ಷೆ ಕೊಡಬೇಕು ಎಂದು ಹೇಳುತ್ತಿದ್ದರು, ಆನಂತರ ಏನಾಯಿತು ಎಂದರೆ 12ನೇ ತಾರೀಖು ಕೆಲವೊಂದು ಜನಾಂಗದವರು ಮಸೀದಿ ಕಡೆ ಹೋಗಿ, ಮಸೀದಿ ಕೆಡೆಯಿಂದ ಕಲ್ಲು ಹೊಡೆಯುವುದಕ್ಕೆ ಶುರು ಮಾಡಿದರು. ಆದುದರಿಂದ, ಪುನಃ ಪೋಲೀಸರು ಇನ್ನೊಂದು ಕಡೆಯಿಂದ ಹೋಗಿ they fire in the air. Armed with stics, Clubs and dangerous weapons. ಇನ್ನೊಂದು ಕಡೆಯಿಂದ ಜನ ಬರುವುದಕ್ಕೆ ಪ್ರಾರಂಭ ಮಾಡಿದರು. From lanes and bylanes ಜನ ಯಾವಾಗ ಸೇರುವುದಕ್ಕೆ ಪ್ರಾರಂಭ ಮಾಡಿದರು ಆಗ ಪೋಲೀಸಿನವರು ಫೈರ್ ಮಾಡಿದರು. Police fire in the air ಎಚ್ಚರಿಕೆ ಕೊಡುವುದಕ್ಕೆ. ಆನಂತರ ಡಿ.ಸಿ, ಡಿ.ಐ.ಜಿ. ಎಸ್.ಪಿ. ಅವರು ಅಲ್ಲಿಗೆ ಹೋಗಿ ರೀ ಎನ್‌ಫೋರ್ಸ್‌ಮೆಂಟ್ ಮಾಡಿ ಕರ್ಫ್ಯೂ ಡಿಕ್ಲೇರ್ ಮಾಡಿದರು. ಅಲ್ಲಿ ಕರ್ಫ್ಯೂ ಡಿಕ್ಲೇರ್ ಮಾಡಿ ಅಲ್ಲಿ ಸೇರಿದ್ದ ಜನರನ್ನು ಚದುರಿಸಿದರು. By strict partolling ಪರಿಸ್ಥಿತಿ ಹತೋಟಿಗೆ ತಂದರು. 11ನೇ ತಾರೀಖು ಸೂಳ್ಯದಲ್ಲಿ a procession was taken out to condemn the murder of the girl in Puttur. Then, stone-pelting incident was reported from Sulya. ಪೋಲೀಸಿನವರು ತಕ್ಷಣ ಅಲ್ಲಿಗೆ ಹೋಗಿ ಪರಿಸ್ಥಿತಿಯನ್ನು ಹತೋಟಿಗೆ ತಂದರು. ಪುತ್ತೂರ್ ಟೌನ್‌ನಲ್ಲಿ ಒಂದು ಮರ್ಡರ್ ಕೇಸ್ ನಾವು ಬುಕ್ ಮಾಡಿದ್ದೆವು. ಜನ ಆ ಕಡೆಯಿಂದ ಕಲ್ಲು ಹೊಡೆದರು, ಈ ಕಡೆಯಿಂದಲ್ಲೂ ಕಲ್ಲು ಹೊಡೆದರು, ಇಂತಹ ಘಟನೆಗಳು

ಯಾವಾಗ ನಡೆಯಿತು ಆಗ ಸರ್ಕಾರದವರು ಈ ಕೇಸನ್ನು ಸಿ.ಓ.ಡಿ.ಗೆ ರೆಫರ್ ಮಾಡಿದರು ಬೇರೆ ಜಿಲ್ಲೆಯಲ್ಲಿ ನಡೆದ ಪ್ರೊಟೆಸ್ಟ್, ಅಜಿಟೇಷನ್ಸ್ ಎಲ್ಲಾ ಸರ್ಕಾರದ ಗಮನಕ್ಕೆ ಬಂದಿದೆ. ಮಂಗಳೂರಿನಲ್ಲೂ ಸಹ ವಿದ್ಯಾರ್ಥಿಗಳು ಕನ್‌ಡೋಲೆನ್ಸ್ ಮಾಡಿ ಅಸಿಸ್‌ಟೆಂಟ್ ಕಮೀಷನರ್‌ಗೆ ಮೆಮೋರ್ಯಾಂಡಮ್ ಕೊಟ್ಟಿದ್ದಾರೆ. ಮಂಗಳೂರಿನಲ್ಲಿ ಬಂದ್ ಕರೆ ಕೊಟ್ಟಿದ್ದರು, ಸೂಳ್ಯದಲ್ಲೂ ಕೂಡ a bundh call was given by the Chamber of Commerce. ಆಮೇಲೆ ವಿದ್ಯಾರ್ಥಿಗಳು ಬಂಟ್ವಾಳದಲ್ಲಿ, ಹೆಬ್ಬರಿ, ವಿಠಲ, ಬ್ರಹ್ಮಾವರ ನಾಗೋಟು, ಮಲ್ಪೆ, ಮುಲ್ಕಿ ಉಪ್ಪಿನಂಗಡಿ, ಸುಬ್ರಮಣ್ಯ, ಗಂಗೊಳ್ಳಿ, ಬೈಂದೂರು, ಇಲ್ಲೆಲ್ಲಾ ವಿದ್ಯಾರ್ಥಿಗಳು ಕ್ಲಾಸಸ್ ಬೈಕಾಟ್ ಮಾಡಿ, ಮೆಮೋರ್ಯಾಂಡಮ್ ಕೊಟ್ಟು ಬಹಳ ಪೀಸ್‌ಫುಲ್ ಆಗಿ ಚದುರಿದರು. ಕಾರ್ಕಳದಲ್ಲೂ ಕೂಡ they took out a procession and a memorandum was submitted to the Tahasildar. ಉಡುಪಿಯಲ್ಲಿ ಸ್ಟೂಡೆಂಟ್ಸ್ ಎಲ್ಲಾ ಸೇರಿ a procession was taken out and a memorandum was submitted to the Tahasildar. ಸುಬ್ರಮಣ್ಯ ಒಂದೂರಿನಲ್ಲಿ ಮಾತ್ರ ಕೆಲವು ವಿದ್ಯಾರ್ಥಿಗಳು ರೋಡ್ ಬ್ಲಾಕ್ ಮಾಡಿ, ಗಲಾಟೆ ಮಾಡುವುದಕ್ಕೆ ಪ್ರಯತ್ನಪಟ್ಟರು. ಆ ಸಮಯದಲ್ಲಿ ಪೋಲೀಸರು ಅಲ್ಲಿಗೆ ಹೋಗಿ ಶಾಂತಿಯುತವಾಗಿ ಅವರನ್ನು ಚದುರಿಸಿದರು. A total of 37 cases have been registered so far. In this connection 38 persons have been arrested and efforts are on to trace the remaining accused. ಸನ್ಮಾನ್ಯ ಸಭಾಧ್ಯಕ್ಷರೆ, ನಾನು ತಮ್ಮ ಮುಖಾಂತರ ವಿರೋಧ ಪಕ್ಷದ ನಾಯಕರಾದಂತಹ ಮಾನ್ಯ ಶ್ರೀ ಯಡಿಯೂರಪ್ಪನವರನ್ನು ಮತ್ತು ಯೋಗಿಶ್ ಭಟ್ ಅವರನ್ನು ಕೇಳಿಕೊಳ್ಳುವುದೇನೆಂದರೆ, ಈ ಘಟನೆಯಲ್ಲಿ ಪೋಲಿಸಿನವರೊಬ್ಬರನ್ನೇ ಹೊಣೆಗಾರಿಕೆ ಮಾಡುವುದು ಬೇಡ ಏಕೆಂದರೆ after all they are also human beings. ಅವರು ಬಹಳ restraint ಆಗಿ ಮಾಡಿ ಪರಿಸ್ಥಿತಿಯನ್ನು ಹತೋಟಿಗೆ ತಂದಿದ್ದಾರೆ. ಪುತ್ತೂರ್ ಟೌನ್‌ನಲ್ಲಿ ಆವತ್ತಿನ ದಿವಸ ಪೋಲೀಸರು ಸ್ವಲ್ಪ ಆ ಕಡೆ, ಈ ಕಡೆ ಹೋಗಿದ್ದರೆ, ಪರಿಸ್ಥಿತಿ ಕೈ ಮೀರಿ ಹೋಗುತ್ತಿತ್ತು. ಏಕೆಂದರೆ, ಆ ಮೆರವಣಿಗೆಯಲ್ಲಿ ಇನ್ನೂರು ಜನ ಹುಡುಗಿಯರು ಇದ್ದರು. ಅಂತಹ ಸಮಯದಲ್ಲಿ ಪೋಲೀಸರು ಹೋಗಿ ಅಲ್ಲಿಯ ಪರಿಸ್ಥಿತಿಯನ್ನು ಹತೋಟಿಗೆ ತಂದಿದ್ದಾರೆ. ಮಾನ್ಯ ಶ್ರೀ ಯೋಗೇಶ್ ಭಟ್ ಈ ಗಲಭೆಯಲ್ಲಿ ಇನ್‌ವಾಲ್ವ್ಡ್ ಆದವರನ್ನು ಬಸ್ಸಿನಲ್ಲಿ ವಾಪಸ್ಸ್ ಕರೆದುಕೊಂಡು ಹೋಗಿ ಒಂದು ಕಡೆ ಡ್ರಾಪ್ ಮಾಡಿದರು ಎಂದು ಹೇಳಿದರು. ನಾವು ಅದು ಹೇಗಾಯಿತು, ಏನಾಯಿತು ಎಂದು ಸರ್ಕಾರದಿಂದ ಪರಿಶೀಲನೆ ಮಾಡುತ್ತೇವೆ. ಒಂದನ್ನು ಮಾತ್ರ ನಾನು ಹೇಳಲು ಇಷ್ಟಪಡುತ್ತೇನೆ. ಇದರಲ್ಲಿ ನಾವು ರಿಸ್ಟ್ರೈಂಟ್ ಆಗಿ ಇರಬೇಕಾಗುತ್ತದೆ. ಈ ರಾಜ್ಯದಲ್ಲಿ, ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡದಲ್ಲಿ ಸುಮಾರು 4-5 ವರ್ಷಗಳಿಂದ ಕೋಮು ಗಲಭೆಗಳಿಗೆ ಸಂಬಂಧಿಸಿದಂತೆ ಯಾವ ಒಂದು ಟೆನ್‌ಷನ್ ಇತ್ತು, ಅದು ಈಗ ದೇವರ ಆಶೀರ್ವಾದದಿಂದ ಇಡೀ ರಾಜ್ಯದಲ್ಲಿ 2-3 ವರ್ಷಗಳಿಂದ ಕಡಿಮೆಯಾಗಿದ್ದು, ರಾಜ್ಯದಲ್ಲಿ ಶಾಂತ ಪರಿಸ್ಥಿತಿ ಇದೆ. ಅದೇ ರೀತಿ ಮುಂದುವರೆಸಿಕೊಂಡು ಹೋಗೋಣ. ಸರ್ಕಾರದ ವತಿಯಿಂದ ನಾವು ಏನು ಕ್ರಮ ತೆಗೆದುಕೊಳ್ಳಬೇಕು ಅದನ್ನು ತೆಗೆದುಕೊಂಡಿದ್ದೇವೆ. ಇನ್ನೇನಾದರೂ ಇದ್ದು ಅದು ತಮ್ಮ

ಗಮನಕ್ಕೆ ಬಂದರೆ, ಅದನ್ನು ತಾವು ನನಗೆ ಹೇಳಿದರೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಲು ಇಷ್ಟಪಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಕೋಮು ಗಲಭೆ ಸಂದರ್ಭದಲ್ಲಿ ಯಾವ ಮುಗ್ಧಜನಗಳ ಅಂಗಡಿಗಳು ಲೂಟಿಯಾದವು ಅಂಥವರಿಗೆ ಪರಿಹಾರ ಕೊಡಬೇಕು. ಅದನ್ನು ಏನಾದರೂ ಮಾಡಬೇಕಾಗುತ್ತದೆ.

ಶ್ರೀ ಆರ್. ರೋಷನ್‌ಬೇಗ್ : ಯಾರು ಯಾರಿಗೆ ಪರಿಹಾರ ಕೊಡಬೇಕು, ಅದನ್ನು ಜಿಲ್ಲಾಧಿಕಾರಿಗಳು ಮಾಡುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರೇ, ಈಗ ಆಗಿರುವಂಥಾದ್ದು ತುಂಬಾ ಸೂಕ್ಷ್ಮವಾದ ವಿಷಯ. ನಾವು ಈ ಸದನದಲ್ಲಿ ಶಾಂತ ರೀತಿಯಲ್ಲಿ ವಾತಾವರಣ ತರುವುದಕ್ಕೆ ನಾವು ಸಹಕರಿಸಬೇಕು. ಒಂದೇ ಒಂದು ವಿಷಯ ಎಂದರೆ, ತಾವೇ ಹೇಳಿದ ಪ್ರಕಾರ 10 ನೇ ತಾರೀಖು ಶಾಂತಿ ಸಮಿತಿ ಸಭೆಗೆ ಎಲ್ಲರೂ ಬಂದಿದ್ದರು, ಎಲ್ಲರೂ ಸಹಕಾರ ಕೊಡುತ್ತೇವೆ ಎಂದು ಹೇಳಿದರು. 11ನೇ ತಾರೀಖು ಯಾವುದೋ ಒಂದು ಜನಾಂಗದವರು ಬಂದು ಒಂದು ಕಡೆ ಸೇರುವುದಕ್ಕೆ ಅವಕಾಶವನ್ನು ಕೊಡದೇ ಇದ್ದರೆ, ಪೋಲೀಸಿನವರು ಎಚ್ಚರ ವಹಿಸಿದ್ದರೆ, ಈ ಕಲ್ಲು ತೂರಾಟದ ಘಟನೆಗಳು ಮರುಕಳಿಸುತ್ತಿರಲಿಲ್ಲ. ನನ್ನ ವಿನಂತಿ ಎಂದರೆ, ಇಂಥ ವಿಶೇಷವಾದ ಸಂದರ್ಭದಲ್ಲಿ ಕಣ್ಣಲ್ಲಿ ಕಣ್ಣಿಟ್ಟು ನೋಡಬೇಕಾಗುತ್ತದೆ. ಶಾಂತಿ ಸಮಿತಿ ಸಭೆಯಲ್ಲಿ ಶಾಂತವಾಗಿರುವುದರ ಬಗ್ಗೆ ಮಾತನಾಡುತ್ತಾರೆ, ಅನಂತರ ಬೆಂಕಿ ಹಚ್ಚುವಂಥ ಕೆಲಸವನ್ನು ಎಲ್ಲರೂ ಮಾಡುತ್ತಾರೆ. ಇದು ನಾವು ನೋಡಿಕೊಂಡು ಬಂದಿರುವಂಥಾದ್ದು. ಹಿಂದಿನ ಅನೇಕ ಘಟನೆಗಳನ್ನು ನೋಡಿದಾಗ ಇದು ತಿಳಿಯುತ್ತದೆ. ಆ ರೀತಿ ಆಗದ ರೀತಿಯಲ್ಲಿ, ಒಂದು ಕಡೆ ಜನ ಸೇರದ ರೀತಿಯಲ್ಲಿ, ಅದು ದೇವಸ್ಥಾನವಿರಲಿ, ಮಸೀದಿ ಇರಲಿ, ಚರ್ಚ್ ಇರಲಿ ಅಥವಾ ಮತ್ತೊಂದು ಜಾಗವಿರಲಿ. ಆ ರೀತಿ ಆಗದ ಹಾಗೆ ಎಚ್ಚರ ವಹಿಸಿದ್ದರೆ ಪುನಃ ಈ ಘಟನೆ ಮರುಕಳಿಸುತ್ತಿರಲಿಲ್ಲ. ನಾವು ನಿರ್ದಿಷ್ಟವಾದ ಯಾವ ಬಸ್ಸಿನ ನಂಬರನ್ನು ಕೊಟ್ಟು ಈ ರೀತಿಯಾಗಿದೆ ಎಂದು ಹೇಳಿದ್ದೇವೆ, ಅದಕ್ಕೆ ಯಾವ ಅಧಿಕಾರಿಗಳು ಸಹಕಾರ ಕೊಟ್ಟಿದ್ದಾರೆ, ಅಂಥ ಪೋಲೀಸ್ ಅಧಿಕಾರಿಗಳ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳಿ, ನೊಂದಿರುವವರಿಗೆ ಪರಿಹಾರ ಕೊಡುವಂಥ ವ್ಯವಸ್ಥೆ ಮಾಡಿ.

ಶ್ರೀ ಎನ್. ಯೋಗೀಶ್ ಭಟ್ : ಜಿಲ್ಲೆಯ ಶಾಸಕರ ಕಡೆಯಿಂದ ಸಂಪೂರ್ಣ ಭರವಸೆಯನ್ನು ನಾವು ಕೊಡುತ್ತಿದ್ದೇವೆ. ಜಿಲ್ಲೆಯಲ್ಲಿ ಸಂಪೂರ್ಣ ಶಾಂತಿ ನೆಲೆಸುವ ರೀತಿಯಲ್ಲಿ ಎಲ್ಲಾ ಸಹಕಾರವನ್ನು ಕೊಡುತ್ತೇವೆ. ಆದರೆ ಪೋಲೀಸ್ ಅಧಿಕಾರಿಗಳು ಪಕ್ಷಪಾತವಿಲ್ಲದೆ ಕೆಲಸ ಮಾಡುವಂಥ ಜವಾಬ್ದಾರಿಯನ್ನು ತಾವು ತೆಗೆದುಕೊಳ್ಳಬೇಕು ಎನ್ನುವ ಒತ್ತಾಯವನ್ನು ಕೂಡ ನಾನು ಈ ಸಂದರ್ಭದಲ್ಲಿ ಮಾಡುತ್ತೇನೆ.

ಉಪಾಧ್ಯಕ್ಷರು : ಈಗ ಪುಟ್ಟೇಗೌಡರು.